# ಪರ್ಯಾಯ ಶೈಕ್ಷಣಿಕ ಯೋಜನೆ : 2021–22

**ತರಗತಿ : 10** **ತಿಂಗಳು : ನವೆಂಬರ್** **ದ್ವಿತೀಯ ಭಾಷೆ: ಕನ್ನಡ**

| ಕ್ರ.ಸಂ | ತಿಂಗಳು/ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 1 | **ನವೆಂಬರ್** ಮೊದಲನೆ ವಾರ | **ಹಕ್ಕಿಗೂಡುಗಳ ನಿಗೂಢ ಜಗತ್ತು**<br>• ಕನ್ನಡ ಸಾಹಿತ್ಯದ ವಿಶೇಷ ಲೇಖನಗಳನ್ನು ಪರಿಚಯಿಸುವುದು<br>• ಪರಿಸರದಲ್ಲಿ ಕಾಣಸಿಗುವ ಪಕ್ಷಿ, ಗೂಡು ಮುಂತಾದವುಗಳನ್ನು ಗಮನಿಸುವುದು. | ಪರಿಸರದ ಕಾಳಜಿಯನ್ನು ವ್ಯಕ್ತಪಡಿಸುವ ವಿವಿಧ ಲೇಖನಗಳನ್ನು ಸಂಗ್ರಹಿಸಿ ಓದಲು ಪ್ರೇರೇಪಿಸುವುದು. ವಿವಿಧ ಪಕ್ಷಿಗಳ ಹೆಸರನ್ನು ಪಟ್ಟಿ ಮಾಡಿಸುವುದು ಹಾಗೂ ಸ್ಥಳೀಯವಾಗಿ ಸಿಗುವ ವಿವಿಧ ಪಕ್ಷಿಗಳ ಗೂಡನ್ನು ಸಂಗ್ರಹಿಸಿ ತರಲು ಹೇಳುವುದು. ಗೂಡಿನ ವಿಶೇಷತೆಗಳನ್ನು ಹೇಳಿಸುವುದು. | |
| | | • ಮಕ್ಕಳಲ್ಲಿ ವಾಕ್ಯ ರಚನಾ ಸಾಮರ್ಥ್ಯ ಬೆಳೆಸುವುದು. | ಲೇಖಕರ ಪರಿಚಯ ಭಾಗವನ್ನು ವಿದ್ಯಾರ್ಥಿಗಳಿಗೆ ಮೌನವಾಗಿ ಓದಿಕೊಳ್ಳಲು ತಿಳಿಸುವುದು. ಮುಖ್ಯಾಂಶಗಳನ್ನು ಗ್ರಹಿಸಿ ತಮ್ಮದೇ ವಾಕ್ಯಗಳಲ್ಲಿ ಬರೆದು ಲೇಖಕರನ್ನು ಪರಿಚಯಿಸಲು ತಿಳಿಸುವುದು. | ಲೇಖಕರ ಕಾಲ, ಸ್ಥಳ, ಕೃತಿ, ಪ್ರಶಸ್ತಿಗಳನ್ನು ವಾಕ್ಯರೂಪದಲ್ಲಿ ಬರೆಸುವುದು. |
| | | • ಸೂಕ್ತ ಸ್ವರಭಾರದೊಂದಿಗೆ ಸ್ಪಷ್ಟವಾಗಿ ಓದುವ ಕೌಶಲವನ್ನು ಬೆಳೆಸಿಕೊಳ್ಳುವರು. | • ಅನುಕೂಲಕಾರರಿಂದ ಮಾದರಿ ವಾಚನ<br>• ವಿದ್ಯಾರ್ಥಿಗಳಿಂದ ಬಾಯ್ದೆರೆ ವಾಚನ<br>• ಮೌನ ಓದು | |
| | | • ಸರಳ ಭಾಷಾಂಶಗಳನ್ನು ಗುರುತಿಸುವುದು | • ಪಾಠದಲ್ಲಿ ಬಂದಿರುವ ಸಂಧಿಪದಗಳನ್ನು ಗುರುತಿಸಿ, ಬಿಡಿಸಿ ಬರೆದು ಸಂಧಿಯ ಹೆಸರು ತಿಳಿಸಲು ಹೇಳುವುದು.<br>• ಪಾಠದಲ್ಲಿ ಬಂದಿರುವ ನಾಮಪದಗಳನ್ನು ಸಂಗ್ರಹಿಸಿ ಮಕ್ಕಳಿಗೆ ನೀಡುವುದು. ಅವುಗಳನ್ನು ನಾಮಪದದ ವಿವಿಧ ವಿಧಗಳಾಗಿ ವರ್ಗೀಕರಿಸಿ ಬರೆಯಲು ತಿಳಿಸುವುದು. | **ಅಭ್ಯಾಸ ಹಾಳೆ – 01** |

| | | | | |
|---|---|---|---|---|
| | **ನವೆಂಬರ್** ಎರಡನೆ ವಾರ | • ಓದಿದ ವಿಷಯವನ್ನು ಗ್ರಹಿಸಿ ತನ್ನ ಮಾತುಗಳಲ್ಲಿ ವಿವರಿಸುವರು. | • ಹಕ್ಕಿಗಳು ಸಂತಾನೋತ್ಪತ್ತಿ ಮಾಡುವ ಬಗೆ, ಹಕ್ಕಿಗಳ ಗೂಡು ಒಳಗೊಂಡ ವಿಚಾರಗಳನ್ನು ಅರಿತು ತಮ್ಮ ಮಾತುಗಳಲ್ಲಿ ವ್ಯಕ್ತಪಡಿಸಲು ಮಕ್ಕಳನ್ನು ಪ್ರೇರೇಪಿಸುವುದು. | |
| | | • ಕೊಟ್ಟಿರುವ ವಿಷಯವನ್ನು ಓದಿ ಅರ್ಥ ಮಾಡಿಕೊಂಡು ಏನು? ಎಲ್ಲಿ? ಮುಂತಾದ ಪ್ರಶ್ನೆಗಳಿಗೆ ಉತ್ತರಿಸುವ ಸಾಮರ್ಥ್ಯ ಬೆಳೆಸುವುದು. | • ಓದಿದ ಅಂಶಗಳನ್ನು ಗ್ರಹಿಸಿ ಹಕ್ಕಿಗೂಡಿನ ವಿಶೇಷತೆ, ಹಕ್ಕಿಗಳು ಗೂಡು ಕಟ್ಟುವ ಉದ್ದೇಶ, ಸ್ಥಳ ಆಯ್ಕೆ ಮಾಡುವ ಬಗೆ, ಗೂಡು ಕಟ್ಟುವಲ್ಲಿ ಹಕ್ಕಿಗಳ ಅಲಂಕಾರ ಪ್ರಜ್ಞೆ ಮುಂತಾದ ಅಂಶಗಳನ್ನು ವಿವರಿಸಿ ಹೇಳಲು ಮಕ್ಕಳಿಗೆ ತಿಳಿಸುವುದು. | ಮೌಲ್ಯಮಾಪನ ಹಾಳೆ –01 |
| | | • ಸೈದ್ಧಾಂತಿಕ ವ್ಯಾಕರಣಾಂಶಗಳನ್ನು ಪರಿಚಯಿಸುವುದು. | • ಕಾಲದ ವಿಧಗಳನ್ನು ಪರಿಚಯಿಸುವುದು.<br>• ವಿಭಕ್ತಿ ಪ್ರತ್ಯಯಗಳನ್ನು ಪರಿಚಯಿಸುವುದು. ವಿವಿಧ ಪದಗಳಲ್ಲಿ ಬಂದಿರುವ ವಿಭಕ್ತಿ ಪ್ರತ್ಯಯಗಳನ್ನು ಗುರುತಿಸುವುದು. | **(ಅಭ್ಯಾಸ ಹಾಳೆ – 02)** |
| | **ನವೆಂಬರ್** ಮೂರನೆ ವಾರ | • **ಸದ್ದು ಮಾಡದಿರು** ಸುತ್ತಲಿನ ಘಟನೆ/ಸನ್ನಿವೇಶ/ವಿಚಾರಗಳನ್ನು ಗಮನಿಸಿ ತನ್ನ ಮಾತಿನಲ್ಲಿ ಅಭಿವ್ಯಕ್ತಿಸುವುದು. | • ಪ್ರಕೃತಿಯಲ್ಲಿ ಪ್ರತಿನಿತ್ಯ ನಡೆಯುವ ಕ್ರಿಯೆಗಳು, ಆಗುವ ಬದಲಾವಣೆಗಳನ್ನು ಗಮನಿಸಿ ತರಗತಿಯಲ್ಲಿ ವಿವರಿಸುವಂತೆ ಮಕ್ಕಳಿಗೆ ಪ್ರೇರೇಪಿಸುವುದು.<br>• ಸಾರ್ಥಕ ಬದುಕಿಗೆ ಬೇಕಾದ ಮಾನವೀಯ ಮೌಲ್ಯಗಳನ್ನು ಪಟ್ಟಿ ಮಾಡಿಸುವುದು. | |
| | | • ಆಲಿಸಿದ ಅಂಶಗಳನ್ನು ಸಂಗ್ರಹಿಸಿ ಅರ್ಥಪೂರ್ಣ ವಾಕ್ಯ ರಚಿಸುವುದು. | • ಸಿಪಿಕೆಯವರ ಕಾಲ, ಸ್ಥಳ, ಕೃತಿ, ಪ್ರಶಸ್ತಿಗಳ ವಿವರ ಒಳಗೊಂಡ ಪ್ರತ್ಯೇಕ ಮಿಂಚುಪಟ್ಟಿಗಳನ್ನು ರಚಿಸಿಕೊಳ್ಳುವುದು. ತರಗತಿಯಲ್ಲಿ ಮಿಂಚುಪಟ್ಟಿಗಳನ್ನು ಪ್ರದರ್ಶಿಸಿ, ಒಬ್ಬ ವಿದ್ಯಾರ್ಥಿಯಿಂದ ಸ್ಪಷ್ಟವಾಗಿ ಓದಿಸುವುದು. ನಂತರ ಮಕ್ಕಳಿಗೆ, ಆಲಿಸಿದ ಅಂಶಗಳನ್ನು ಗ್ರಹಿಸಿ ವಾಕ್ಯರೂಪದಲ್ಲಿ ಕವಿ ಪರಿಚಯ ಬರೆಯಲು ತಿಳಿಸುವುದು. | |

| | | | | |
|---|---|---|---|---|
| | | • ಪದ್ಯವಾಚನಾ ಸಾಮರ್ಥ್ಯವನ್ನು ಬೆಳೆಸುವುದು. | • ಅನುಕೂಲಕಾರರಿಂದ ಪದ್ಯಭಾಗದ ಮಾದರಿ ವಾಚನ<br>• ವಿದ್ಯಾರ್ಥಿಗಳಿಂದ ಸಾಮೂಹಿಕವಾಗಿ ಪದ್ಯವಾಚನ ಮಾಡಿಸುವುದು. | |
| | | • ಭಾಷಾಂಶಗಳನ್ನು ಅರಿಯುವರು | • ನಿಘಂಟಿನ ಸಹಾಯದಿಂದ ಪದ್ಯಭಾಗದಲ್ಲಿ ಬಂದಿರುವ ಹೊಸ ಪದಗಳಿಗೆ ಅರ್ಥವನ್ನು ಹುಡುಕಿಸುವ ಚಟುವಟಿಕೆ ಮಾಡಿಸುವುದು.<br>• ಪದ್ಯಭಾಗದಲ್ಲಿ ಬಳಕೆಯಾಗಿರುವ ಧಾತುಗಳನ್ನು ಪಟ್ಟಿ ಮಾಡಿಸಿ, ಓದಿಸುವುದು<br>• ಪದ್ಯಭಾಗದಲ್ಲಿ ಬಳಕೆಯಾಗಿರುವ ಕನ್ನಡ ಸಂಧಿ ಪದಗಳನ್ನು ಬಿಡಿಸಿ, ಸಂಧಿಯನ್ನು ಹೆಸರಿಸುವ ಚಟುವಟಿಕೆ ಮಾಡಿಸುವುದು | **(ಅಭ್ಯಾಸ ಹಾಳೆ – 03)** |
| | **ನವೆಂಬರ್** ನಾಲ್ಕನೆಯ ವಾರ | • ಪದ್ಯದ ಭಾವಾರ್ಥವನ್ನು ಅರ್ಥೈಸಿಕೊಂಡು ತನ್ನದೇ ಮಾತುಗಳಲ್ಲಿ ವಿವರಿಸುವರು. | • ಪದ್ಯದ ಭಾವಾರ್ಥವನ್ನು ಶಿಕ್ಷಕರು ಸೂಕ್ತ ಉದಾಹರಣೆಗಳೊಂದಿಗೆ ವಿವರಿಸುವರು.<br>• ಪದ್ಯಭಾಗದ ಭಾವಾರ್ಥವನ್ನು ಅರ್ಥೈಸಿಕೊಂಡು ಬರೆಯಲು ತಿಳಿಸುವುದು.<br>• ಪದ್ಯಭಾಗದ ಆಶಯ ಹಾಗೂ ಪದ್ಯದಲ್ಲಿ ಬಿಂಬಿತವಾಗಿರುವ ಮೌಲ್ಯಗಳನ್ನು ಪಟ್ಟಿಮಾಡಿಸುವುದು. | |
| | | • ಮೌಲ್ಯವನ್ನು ಬಿಂಬಿಸುವ ಸರಳ ಪದ್ಯಗಳನ್ನು ಓದಿ ಅರ್ಥೈಸುವುದು. | • ಗದ್ದಲದ, ಆಡಂಬರದ ಬದುಕು ನಿಷ್ಪ್ರಯೋಜಕ ಎಂಬ ಮೌಲ್ಯವನ್ನು ಸಾರುವ ಡಿವಿಜಿಯವರ ಕಗ್ಗದ ಸಾಲುಗಳನ್ನು ಸಂಗ್ರಹಿಸಿ, ಓದಿ ಅರ್ಥವನ್ನು ಗ್ರಹಿಸಿ ಬರೆಯುವಂತೆ ಪ್ರೇರೇಪಿಸುವುದು | ಸದ್ದು ಮಾಡದೆ ಮೌನದಿಂದ ಬದುಕಿದ ಸಾಧಕರೊಬ್ಬರ ಜೀವನ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ. |

## ಅಭ್ಯಾಸ ಹಾಳೆ – 1

## ಹಕ್ಕಿಗೂಡುಗಳ ನಿಗೂಢ ಜಗತ್ತು

ಈ ಕೆಳಗೆ ನೀಡಿರುವ ನಾಮಪದಗಳನ್ನು ಸರಿಯಾಗಿ ಗುರುತಿಸಿ ಸೂಕ್ತವಾಗಿ ವರ್ಗೀಕರಿಸಿ ನಿಗದಿಪಡಿಸಿದ ಕೋಷ್ಟಕದಲ್ಲಿ ಬರೆಯಿರಿ.

**ಶಾಲೆ, ಎರಡು, ವಿಜ್ಞಾನಿ, ಅವು, ಕೆಲವು, ವಾಸ್ತುಶಿಲ್ಪಿ, ಅಷ್ಟು, ಪರ್ವತ, ಹಲವು, ಅಮೇರಿಕಾ, ಚೆಂಡು, ತಮ್ಮ , ಏಕೆ, ಸಾಗರ, ಯಾವುದು, ಕೃಪಾಕರ, ಪುಟ್ಟಸ್ವಾಮಿ**

| ವಸ್ತುವಾಚಕಗಳು | | | ಸರ್ವನಾಮಗಳು | | | ಸಂಖ್ಯಾ ವಾಚಕ | ಪರಿಮಾಣ ವಾಚಕ |
|---|---|---|---|---|---|---|---|
| ರೂಢನಾಮ | ಅಂಕಿತನಾಮ | ಅನ್ವರ್ಥನಾಮ | ಪುರುಷಾರ್ಥಕ ಸರ್ವನಾಮ | ಆತ್ಮಾರ್ಥಕ ಸರ್ವನಾಮ | ಪ್ರಶ್ನಾರ್ಥಕ ಸರ್ವನಾಮ | | |
| | | | | | | | |
| | | | | | | | |
| | | | | | | | |
| | | | | | | | |

## ಮೌಲ್ಯಮಾಪನ ಹಾಳೆ – 01
## ಹಕ್ಕಿಗೂಡುಗಳ ನಿಗೂಢ ಜಗತ್ತು

ಅ. ಈ ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಹಕ್ಕಿಗೂಡಿನ ವಿಶೇಷತೆಗಳೇನು?

2. ಹಕ್ಕಿಗಳು ಗೂಡು ನಿರ್ಮಿಸುವ ಉದ್ದೇಶವೇನು?

3. ಹಕ್ಕಿಗಳು ಗೂಡನ್ನು ಎಲ್ಲೆಲ್ಲಿ ಕಟ್ಟಬಲ್ಲವು?

4. ಗೂಡು ಕಟ್ಟುವಲ್ಲಿ ಹಕ್ಕಿಗಳ ಅಲಂಕಾರ ಪ್ರಜ್ಞೆಯನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ?

## ಅಭ್ಯಾಸ ಹಾಳೆ – 02

## ಹಕ್ಕಿಗೂಡುಗಳ ನಿಗೂಢ ಜಗತ್ತು

**1. ಕಾಲ ಸೂಚಕ ಪ್ರತ್ಯಯಗಳನ್ನು ಸೂಕ್ತವಾಗಿ ಹೊಂದಿಸಿ ಬರೆಯಿರಿ.**

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| 1. ಭೂತಕಾಲ | ಉತ್ತ |
| 2. ವರ್ತಮಾನ ಕಾಲ | ವ |
| 3. ಭವಿಷ್ಯತ್ ಕಾಲ | ದ |

2. **ಕೆಳಗೆ ನೀಡಿರುವ ಕ್ರಿಯಾಪದಗಳನ್ನು ಅವು ಸಂಬಂಧಿಸಿರುವ ಕಾಲಕ್ಕೆ ವರ್ಗೀಕರಿಸಿ ಬರೆಯಿರಿ.**
**ಮಾದರಿ : ನೋಡಿದನು – ಭೂತಕಾಲ**

| **ನೋಡುತ್ತಾನೆ, ಕಟ್ಟಿದವು, ಹೋಗುವಳು, ಕಾಣುತ್ತದೆ, ಪಡೆದಿವೆ, ಕಾಣುತ್ತವೆ, ಬರುವುದು, ಮಾಡುತ್ತಾಳೆ, ಹಾಡಿದಳು, ಕೇಳಿತು, ಬರುವರು, ಹಾರುತ್ತವೆ, ಕಟ್ಟುವವು, ಓದಿದರು, ಕೇಳುವರು,** | |
|---|---|
| ಭೂತಕಾಲ | |
| ವರ್ತಮಾನ ಕಾಲ | |
| ಭವಿಷ್ಯತ್ ಕಾಲ | |

**3. ಈ ಕೆಳಗಿನ ಪದಗಳಲ್ಲಿರುವ ವಿಭಕ್ತಿ ಪ್ರತ್ಯಯ ಗುರುತಿಸಿ, ವಿಭಕ್ತಿಯನ್ನು ಹೆಸರಿಸಿ.**

**ಮಾದರಿ:** ಮರವನ್ನು – ವಿಭಕ್ತಿ ಪ್ರತ್ಯಯ – ಅನ್ನು, ವಿಭಕ್ತಿ ಹೆಸರು **–** ದ್ವಿತೀಯ ವಿಭಕ್ತಿ.

| **ನಾಮಪದ** | **ವಿಭಕ್ತಿ ಪ್ರತ್ಯಯ** | **ವಿಭಕ್ತಿ ಹೆಸರು** |
|---|---|---|
| ಕ್ರಿಯೆಯಲ್ಲಿ | | |
| ಸಂತತಿಗೆ | | |
| ಬದುಕಿನ | | |
| ಗೂಡನ್ನು | | |
| ಕಡ್ಡಿಯಿಂದ | | |
| ಹಕ್ಕಿಯು | | |
| ಮರದ ದೆಸೆಯಿಂದ | | |

## ಅಭ್ಯಾಸ ಹಾಳೆ – 03

## ಸದ್ದು ಮಾಡದಿರು

ಅ. ಈ ಕೆಳಗೆ ನೀಡಿರುವ ಕ್ರಿಯಾಪದಗಳ ಧಾತುಗಳನ್ನು ಬರೆಯಿರಿ

ಮಾದರಿ : ಮಾಡಿದನು – ಮಾಡು

| | | | |
|---|---|---|---|
| ಸೇರಿದನು | | ಕರಗುತ್ತದೆ | |
| ಸರಿಯುವುದು | | ಮುಗಿಸಿದನು | |
| ಕೂಗಿದರು | | ಹಾರುತ್ತಾನೆ | |
| ಅಬ್ಬರಿಸುತ್ತದೆ | | ತೊರೆದನು | |
| ಹೋದನು | | ತಿಂದಳು | |
| ಬಿದ್ದರು | | ಸೋತವು | |

ಆ. ಕೆಳಗಿನ ಸಂಧಿಪದಗಳನ್ನು ಬಿಡಿಸಿ ಸಂಧಿಯನ್ನು ಹೆಸರಿಸಿ.

ಮಾದರಿ : ಬಿರುದಿರದೆ = ಬಿರುದು + ಇರದೆ ( ಲೋಪ ಸಂಧಿ)

| ಸಂಧಿಪದ | ಬಿಡಿಸುವ ಕ್ರಮ | ಸಂಧಿಯ ಹೆಸರು |
|---|---|---|
| ದೀಪದೆದುರು | | |
| ಸಿಡಿದಬ್ಬರಿಸು | | |
| ಅಂತಿರದೆ | | |
| ಮೌನಿಯಾಗು | | |
| ಕರ್ತವ್ಯವನ್ನು | | |
| ಕರಗುವಿಬ್ಬನಿ | | |
| ಹೊಸಗನ್ನಡ | | |